ಕರ್ನಾಟಕ ಸರ್ಕಾರ
Government of Karnataka

# ಇ-ಆಡಳಿತ ಕಛೇರಿ

ಗ್ರಾಮೀಣಾಭಿವೃದಿ ಮತ್ತು ಪಂಚಾಯತ್ ರಾಜ್ ಇಲಾಖೆ
3ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560001

**ದೂರವಾಣಿ ಸಂಖ್ಯೆ: 080-22032754, ಇ-ಮೇಲ್: diregov.rdpr@gov.in**

---

ಸಂ: ಗ್ರಾಅಪ/47/ಇ-ಆಡಳಿತ/2020 ದಿನಾಂಕ:22.09.2020

ಇವರಿಗೆ:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು.

ಮಾನ್ಯರೇ,

ವಿಷಯ: ಗ್ರಾಮ ಪಂಚಾಯತಿಗಳಲ್ಲಿ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಜನನ ಮರಣ ಪ್ರಮಾಣ ಪತ್ರಗಳನ್ನು ವಿತರಣೆ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ರವರ ಅ.ಸ.ಪ. ಸಂ. ಆಸಾನಿ 30 ಜಮನೋ 2020, ದಿನಾಂಕ:24.06.2020.
2. ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ), ಗ್ರಾಅಪ ಇಲಾಖೆ ರವರ ಅಧಿಸೂಚನೆ ಸಂ: ಗ್ರಾಅಪ 555 ಗ್ರಾಪಂಅ 2020, ದಿನಾಂಕ:16.07.2020.

******

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 58 ((1-ಎ)(1)(vii) ರಲ್ಲಿ ಗ್ರಾಮ ಪಂಚಾಯತಿಗಳು ಜನನ ಮತ್ತು ಮರಣಗಳ ತ್ವರಿತ ನೋಂದಣಿ ಮತ್ತು ಅದನ್ನು ವರದಿ ಮಾಡುವುದನ್ನು ಖಚಿತಪಡಿಸಿಕೊಳ್ಳುವ ಕರ್ತವ್ಯ ಹೊಂದಿರುವುದರಿಂದ,

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳವರ ಅರೆ ಸರ್ಕಾರಿ ಪತ್ರದ ಸಂಖ್ಯೆ: ಆಸಾನಿ 30 ಜಮನೋ 2020, ದಿನಾಂಕ:24.06.2020 ರ ಪತ್ರದಲ್ಲಿ, ಗ್ರಾಮ ಪಂಚಾಯತಿ ಮಟ್ಟದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು (ಪಿಡಿಓ) ಜನನ ಮರಣ ಪ್ರಮಾಣ ಪತ್ರಗಳ ವಿತರಣಾಧಿಕಾರಿಯನ್ನಾಗಿ ನೇಮಿಸಬಹುದಾಗಿದೆ ಎಂದು ತಿಳಿಸಿರುವುದರಿಂದ ಹಾಗೂ ಸದರಿ ಪತ್ರದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಜನನ ಮರಣ ಪ್ರಮಾಣ ಪತ್ರಗಳ ವಿತರಣಾಧಿಕಾರಿಗಳನ್ನಾಗಿ ನೇಮಿಸಲು ಅನುಮತಿ ನೀಡಿರುವುದರಿಂದ,

ರಾಷ್ಟ್ರೀಯ ಜನನ ಮರಣ ಕಾಯ್ದೆ 1969 ರ ಅಧ್ಯಾಯ 5 ರ ಪ್ರಕಟಣ 27 ರಡಿ ಗ್ರಾಮ ಪಂಚಾಯತಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಇ-ಜನ್ಮ ತಂತ್ರಾಂಶದಲ್ಲಿ ತಮ್ಮ ಡಿಜಿಟಲ್ ಸಹಿಯ ಮುಖಾಂತರ ವ್ಯಕ್ತಿಗಳ

Scanned with CamScanner

ಜನನ ಮತ್ತು ಮರಣ ಪ್ರಮಾಣ ಪತ್ರಗಳ ವಿತರಣಾಧಿಕಾರಿಗಳನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರವು ನೇಮಿಸಿ ಆದೇಶಿಸಲಾಗಿದೆ.

ಅದರಂತೆ, ಮೊದಲನೇ ಹಂತದಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಜನನ, ಮರಣ ಪ್ರಮಾಣ ಪತ್ರಗಳನ್ನು ವಿತರಣೆ ಮಾಡುವ ಸಲುವಾಗಿ ಈಗಾಗಲೇ ಗ್ರಾಮ ಲೆಕ್ಕಾಧಿಕಾರಿಗಳು ಅನುಮೋದಿಸಿರುವ ಜನನ, ಮರಣ ಪ್ರಮಾಣ ಪತ್ರಗಳ ಪ್ರತಿಯನ್ನು ಸಾರ್ವಜನಿಕರ ಬೇಡಿಕೆ ಮೇಲೆ ಪ್ರಿಂಟ್ ಮಾಡಿ ವಿತರಿಸುವಂತೆ ಈಗಾಗಲೇ ಪಂಚತಂತ್ರ ತಂತ್ರಾಂಶವನ್ನು eJanma ತಂತ್ರಾಂಶದೊಂದಿಗೆ ಸಂಯೋಜನೆ ಮಾಡಲಾಗಿದೆ

ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಓ) ಗಳನ್ನು ಜನನ, ಮರಣ ಪ್ರಮಾಣ ಪತ್ರಗಳ ವಿತರಣಾಧಿಕಾರಿಗಳಾಗಿ ನೇಮಿಸಿ ಸರ್ಕಾರದ ಅಧಿಸೂಚನೆ ಸಂ. ಗ್ರಾಅಪ 555 ಗ್ರಾಪಂಅ ದಿನಾಂಕ:16.07.2020 ರಂದು ಅಧಿಸೂಚನೆ ಹೊರಡಿಸಿರುವ ಹಿನ್ನೆಲೆಯಲ್ಲಿ, ಅದರಂತೆ ಪಂಚತಂತ್ರ ಮತ್ತು ಇ-ಜನ್ಮ ತಂತ್ರಾಂಶವನ್ನು ಸಂಯೋಜನೆ (Integrate) ಮಾಡಲಾಗಿದ್ದು, ಪಿ.ಡಿ.ಓ /ಡೇಟಾ ಎಂಟ್ರಿ ಆಪರೇಟರ್‌ಗಳು ಜನನ ಮರಣ ಪ್ರಮಾಣ ಪತ್ರಗಳನ್ನು ವಿತರಿಸುವ ಸಂದರ್ಭದಲ್ಲಿ ಗಮನಿಸಬೇಕಾದ ಅಂಶಗಳು.

- ಜನನ, ಮರಣ ನೋಂದಣಿ ಕಾರ್ಯವನ್ನು ನಿರ್ವಹಿಸುವ ಅಧಿಕಾರ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಲೆಕ್ಕಾಧಿಕಾರಿ ಹಾಗೂ ನಗರ ಪ್ರದೇಶದಲ್ಲಿ ಆರೋಗ್ಯ ಅಧಿಕಾರಿ/ಆರೋಗ್ಯ ನಿರೀಕ್ಷಕರ ಕರ್ತವ್ಯ ಮತ್ತು ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಆಯಾ ಆರೋಗ್ಯ ಅಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ. ಪಿ.ಡಿ.ಓ ರವರುಗಳಿಗೆ ಜನನ ಮರಣ ನೋಂದಣಿ ಮಾಡುವ ಅಥವಾ ಜನನ ಮರಣ ದಾಖಲೆಗಳ ತಿದ್ದುಪಡಿ ಮಾಡುವ ಅವಕಾಶ ಇ-ಜನ್ಮ ತಂತ್ರಾಂಶದಲ್ಲಿ ಕಲ್ಪಿಸಿರುವುದಿಲ್ಲ. (ಜನನ ಮರಣ ನೋಂದಣಿಗಾಗಿ / ತಿದ್ದುಪಡಿಗಾಗಿ ಅಟಲ್ ಜೀ ಜನಸ್ನೇಹಿ ಕೇಂದ್ರಕ್ಕೆ ಭೇಟಿ ನೀಡಬೇಕು ಅಥವಾ ನೋಂದಣಾಧಿಕಾರಿಗಳನ್ನು ಸಂಪರ್ಕಿಸಬೇಕು)
- ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಆನ್‌ಲೈನ್ ಜನನ ಮರಣ ನೋಂದಣಿ ವ್ಯವಸ್ಥೆಯು ದಿನಾಂಕ:01.04.2015 ರಿಂದ ಜಾರಿಯಲ್ಲಿದ್ದು, ಸದರಿ ದಿನಾಂಕದ ಹಿಂದಿನ ದಾಖಲೆಗಳ ಪ್ರಮಾಣ ಪತ್ರಗಳಿಗಾಗಿ ಅರ್ಜಿದಾರರು ಸಂಬಂಧಿಸಿದ ತಾಲ್ಲೂಕು ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.
- ಪಂಚಾಯತಿ ವ್ಯಾಪ್ತಿಯಲ್ಲಿ ನೋಂದಣಿಯಾಗಿರುವ ಜನನ/ಮರಣ ಘಟನೆಗಳನ್ನು ಹೆಸರು/ದಿನಾಂಕ/ತಂದೆ/ತಾಯಿಯ ಹೆಸರು ನಮೂದಿಸಿ (search) ಹುಡುಕಬಹುದು.
- ಪಂಚಾಯತಿ ವ್ಯಾಪ್ತಿಯ ಹೊರಗಡೆ ನೋಂದಣಿಯಾಗಿರುವ ಘಟನೆಗಳನ್ನು ಹುಡುಕಲು (search) ನೋಂದಣಿ ಸಂಖ್ಯೆ ಕಡ್ಡಾಯ.
- ಗ್ರಾಮ ಪಂಚಾಯತಿಯ ಬಾಪೂಜಿ ಸೇವಾ ಕೇಂದ್ರಗಳಲ್ಲಿ Operator ಗಳನ್ನು ಪಂಚತಂತ್ರ ತಂತ್ರಾಂಶಕ್ಕೆ ಲಾಗಿನ್ ಆಗಿ ಸೇವೆಗಳ ವಿಭಾಗದಲ್ಲಿ ಇ-ಜನ್ಮ Link ಅನ್ನು Click ಮಾಡಿದಲ್ಲಿ ಇ-ಜನ್ಮ ತಂತ್ರಾಂಶ Open ಆಗುವುದು. ಸದರಿ ತಂತ್ರಾಂಶವನ್ನು ಬಳಸುವ ವಿಧಾನ ಕೈಪಿಡಿಯಲ್ಲಿ ವಿವರಿಸಲಾಗಿದೆ.

Scanned with CamScanner

- ಜನನ ಹಾಗೂ ಮರಣ ಪ್ರಮಾಣ ಪತ್ರಗಳನ್ನು ವಿತರಿಸಿದ ನಂತರ ಪ್ರತಿ ಪ್ರಮಾಣ ಪತ್ರಕ್ಕೆ ರೂ.5/- ರಂತೆ ಸರ್ಕಾರಿ ಖಾತೆ ಸಂಖ್ಯೆಯಾದ 1475-00-012-1-02 ಗೆ ಖಜಾನೆ-2 ತಂತ್ರಾಂಶದ ಮೂಲಕ ಚಲನ್ ಸೃಜಿಸಿ ಬ್ಯಾಂಕ್ ಮೂಲಕ ಹಣವನ್ನು ಜಮಾ ಮಾಡಬೇಕು.
- ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ರಾಜ್ಯದ ಯಾವುದೇ ನೋಂದಣಿ ಘಟಕದಲ್ಲಿ ನೋಂದಣಿಯಾಗಿರುವ ಪ್ರಮಾಣ ಪತ್ರಗಳನ್ನು ವಿತರಿಸುವ ಅವಕಾಶ ಕಲ್ಪಿಸಲಾಗಿದೆ. ತಮ್ಮ ವ್ಯಾಪ್ತಿಯ ಗ್ರಾಮದ ಘಟನೆಗಳನ್ನು ಹೆಸರು ಮತ್ತು ದಿನಾಂಕದ ಆಧಾರದಲ್ಲಿ ಹುಡುಕಬಹುದು, ತಮ್ಮ ವ್ಯಾಪ್ತಿ ಅಲ್ಲದ ಗ್ರಾಮಗಳಲ್ಲಿನ / ಘಟಕಗಳಲ್ಲಿನ ಘಟನೆಗಳನ್ನು ಹುಡುಕಲು ಅರ್ಜಿದಾರರಿಂದ ನೋಂದಣಿ ಸಂಖ್ಯೆಯನ್ನು ಪಡೆದು ಹುಡುಕಬೇಕಾಗುತ್ತದೆ. (ಉದಾಹರಣೆ: ನೋಂದಣಿ ಸಂಖ್ಯೆ- {123456/V/B/2020/012345})
- ಜನನ ಮರಣ ಪ್ರಮಾಣ ಪತ್ರಗಳನ್ನು ವಿತರಿಸಲು ಬೇಕಾದ ಖಾಲಿ ನಮೂನೆಗಳನ್ನು ಮತ್ತು ಹಾಲೋಗ್ರಾಂಗಳನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಅಥವಾ ತಾಲ್ಲೂಕು ಸಾಂಖ್ಯಿಕ ನಿರೀಕ್ಷಕರಿಂದ ಪಡೆಯುವುದು.
- ಜನನ ಮರಣ ಪ್ರಮಾಣ ಪತ್ರಗಳನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಅಥವಾ ತಾಲ್ಲೂಕು ಸಾಂಖ್ಯಿಕ ನಿರೀಕ್ಷಕರಿಂದ ಪಡೆದ ಖಾಲಿ ನಮೂನೆಗಳಲ್ಲಿಯೇ ಮುದ್ರಿಸಬೇಕು ಮತ್ತು ಹಾಲೋಗ್ರಾಂಗಳನ್ನು ಅಂಟಿಸಬೇಕು. ನಂತರ ಪ್ರಮಾಣ ಪತ್ರದಲ್ಲಿ Date of issue ಅಡಿಯಲ್ಲಿ ಗ್ರಾಮ ಪಂಚಾಯತಿಯ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ಮುದ್ರೆಯನ್ನು ಹಾಕಬೇಕು. ಅದೇ ರೀತಿಯಲ್ಲಿ ಹಾಲೋಗ್ರಾಂ ಮತ್ತು ಗ್ರಾಮ ಪಂಚಾಯತಿ ಮುದ್ರೆಯನ್ನು ಹಾಕಬೇಕು.

ಪ್ರಮಾಣ ಪತ್ರ ಸೃಜನೆ ಮಾಡುವಲ್ಲಿ ಯಾವುದೇ ಸಂದೇಹಗಳಿದ್ದಲ್ಲಿ ಇ-ಜನ್ಮ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ:1800-425-6578 / 08022869711 / 08022869721 / 08022869731 / 08022869751 ಗಳಿಗೆ ಕಛೇರಿ ಸಮಯದಲ್ಲಿ ಕರೆ ಮಾಡಬಹುದು ಅಥವಾ ejanmahelpdesk@gmail.com ಗೆ ಇಮೇಲ್ ಮಾಡಬಹುದು. (ಗ್ರಾಮ ಪಂಚಾಯತಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಇ-ಜನ್ಮ ತಂತ್ರಾಂಶದ ಮೂಲಕ ಜನನ ಮರಣ ಪ್ರಮಾಣ ಪತ್ರಗಳನ್ನು ವಿತರಿಸುವ ಬಗ್ಗೆ ಕೈಪಿಡಿಯನ್ನು ಪತ್ರದೊಂದಿಗೆ ಲಗ್ತತಿಸಿದೆ).

ತಮ್ಮ ವಿಶ್ವಾಸಿ,

(ಪ್ರಿಯಾಂಕ ಮೇರಿ ಫ್ರಾನ್ಸಿಸ್, ಭಾಆಸೇ)
ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
2. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಆಡಳಿತಾಧಿಕಾರಿಗಳು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು

Scanned with CamScanner

ಮಾಹಿತಿಗಾಗಿ:

1. ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.

Scanned with CamScanner